ಇ) ಪೂರ್ತಿ ತಾಲ್ಲೂಕಿನ ಮಾಹಿತಿ ರೈತರಿಗೆ ಪ್ರತಿ ದಿನಾಲೂ ರೆಕಾರ್ಡ್ ಆಫ್ ರೈಟ್ಸ್ ಇತ್ಯಾದಿ ದಾಖಲೆಗಳಿಗೆ ದಾಖಲಾತಿಗಳು ಸಿಗದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಇದರಿಂದ ಬಡ ರೈತರ ತೊಂದರೆಯನ್ನು ಅನುಭವಿಸುತ್ತಾ ಅಲ್ಲಿಯ ಸಿಬ್ಬಂದಿಯವರಿಗೆ ಹೆಚ್ಚಿನ ಹಣವನ್ನು ನೀಡಿ ದಾಖಲಾತಿಗಳು ಪಡೆಯುವುದು ನಿಜವಲ್ಲವೇ;

ಉ) ಇಂತಹ ಹೆಚ್ಚಿನ ಹಣ ಪಡೆಯುವವರ ಮೇಲೆ ಸರ್ಕಾರ ಕೈಗೊಂಡಿರುವ ಕ್ರಮವೇನು;

ಊ) ಪ್ರತಿ ಗ್ರಾಮದ ಲೆಕ್ಕಪಾಲಕರ ಕೇಂದ್ರ ಸ್ಥಾನದಲ್ಲಿ ಗಣಕಯಂತ್ರವನ್ನು ಅಳವಡಿಸಿ ರೈತರಿಗೆ ಅನುಕೂಲು ಮಾಡಿಕೊಡಬಹುದೇ?

ಶ್ರೀ ಹೆಚ್.ಸಿ.ಶ್ರೀಕಂಠಯ್ಯ (ಕಂದಾಯ ಸಚಿವರು) :

ಅ) ಇಲ್ಲ. ಸೇಡಂ ತಾಲ್ಲೂಕು ಸಂಬಂಧಿಸಿದಂತೆ 2001-02 ನೇ ಸಾಲಿನ ಬೆಳೆ ನಮೂದಿಸಿದ ಪಹಣಿಯನ್ನು ಉಚಿತವಾಗಿ ವಿತರಣೆ ಮಾಡಲಾಗಿದೆ.

ಆ) ಹೌದು

ಇ) ಇಂತಹ ಪ್ರಕರಣಗಳು ತಾಲ್ಲೂಕು ಕಾರ್ಯಾಲಯದ ಗಮನಕ್ಕೆ ಬಂದಿರುವುದಿಲ್ಲ. ರೈತರ ಕೋರಿಕೆ ಅನುಸಾರ ದಾಖಲೆಗಳನ್ನು ನೀಡಲಾಗುತ್ತಿದೆ.

ಈ) ಇಲ್ಲ. ಸರ್ಕಾರವು ನಿಗದಿಪಡಿಸಿದ ಶುಲ್ಕವನ್ನು ಪಡೆದು ಪಹಣಿ ಪತ್ರಿಕೆಯನ್ನು ನೀಡಲಾಗುತ್ತಿದೆ.

ಉ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಊ) ಈ ಬಗ್ಗೆ ಯಾವುದೇ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿರುವುದಿಲ್ಲ.

ಕೆ.ಆರ್.ನಗರ ತಾಲ್ಲೂಕು ಹನಸೋಗೆಯಲ್ಲಿ ಬೈಪಾಸ್ ರಸ್ತೆ ನಿರ್ಮಿಸುವ ಬಗ್ಗೆ

1910 (2336) ಶ್ರೀ ಬಸವರಾಜು ಹೆಚ್.ಸಿ. (ಪಿರಿಯಾಪಟ್ಟಣ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ನಗರ ತಾಲ್ಲೂಕು ಚುಂಚನಕಟ್ಟೆ ಹೋಬಳಿ ಹನಸೋಗೆ ಗ್ರಾಮದ ಕೆ.ಆರ್.ರಸ್ತೆಗೆ ಬೈಪಾಸ್ ರಸ್ತೆ ನಿರ್ಮಾಣಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಈ ಪ್ರಸ್ತಾವನೆಗೆ ಅನುಮೋದನೆ ನೀಡಲಾಗಿದೆಯೇ;

ಇ) ಅನುಮೋದನೆ ನೀಡಲಾಗಿದ್ದಲ್ಲಿ ನಿಗದಿಪಡಿಸಲಾಗಿರುವ ಅನುದಾನವೆಷ್ಟು;

ಈ) ಎಂದಿನಿಂದ ಕಾಮಗಾರಿ ಪ್ರಾರಂಭಿಸಲಾಗುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಹನಸೋಗೆ ಗ್ರಾಮದ ಬಳಿ ಕೆ.ಆರ್.ನಗರ ರಾಮನಾಥಪುರ ಜಿಲ್ಲಾ ಮುಖ್ಯ ರಸ್ತೆಗೆ ಬೈಪಾಸ್ ರಸ್ತೆ ನಿರ್ಮಾಣವನ್ನು ನಬಾರ್ಡ್ ಯೋಜನೆಯಡಿ ಕೈಗೊಳ್ಳಲು 2000-01ರಲ್ಲಿ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುತ್ತದೆ.

ಆ) ನಬಾರ್ಡ್ ಸಾಲ ಸಹಾಯದಡಿ ಬೈಪಾಸ್ ರಸ್ತೆ ನಿರ್ಮಾಣಕ್ಕೆ ಅವಕಾಶವಿಲ್ಲದ ಕಾರಣ ಈ ಪ್ರಸ್ತಾವನೆಯನ್ನು ಪರಿಗಣಿಸಲಾಗಿರುವುದಿಲ್ಲ.

ಇ) ಪ್ರಶ್ನೆ ಉದ್ಭವಿಸುವುದಿಲ್ಲ.

ಈ) ಪ್ರಶ್ನೆ ಉದ್ಭವಿಸುವುದಿಲ್ಲ.